## 59

# ನನಗಾಗಿ ಒಂದು ಕಥೆಯನ್ನು ಹೇಳು

### ಓದುವ ಮನೆಪಾಠ #24

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).
  P. ಪ್ರಯಾಸದ ಸೇವೆ (ಮುಂದುವರೆಯುವದು).
    3. ಯೇಸು ಫರಿಸಾಯನ ಮನೆಗೆ ಆಹ್ವಾನಿಸಲ್ಪಟ್ಟನು - ಹಬ್ಬದ ಕುರಿತ ಅರ್ಹ ಬೋಧನೆ (ಲೂಕ 14:1-24).
      a. ಮಾನವೀಯತೆ ಕುರಿತ ಬೋಧನೆ (ಲೂಕ 14:7-11).
      b. ನಿಸ್ವಾರ್ಥ ಕುರಿತ ಬೋಧನೆ (ಲೂಕ 14:12-14).
      c. ಭೋಜನ ಕುರಿತ ಬೋಧನೆ (ಲೂಕ 14:16-24).
    4. ಅನೇಕ ಮಂದಿ ಯೇಸುವನ್ನು ಹಿಂಬಾಲಿಸಿದರು - ಒಂದು ಪಾಠ (ಲೂಕ 14:25-35).
    5. ಪಾಪಿಗಳು, ಸುಂಖದವರೂ ಯೇಸುವನ್ನು ಹಿಂಬಾಲಿಸಿದರು (ಲೂಕ 15:1-32) ಮನಮುಟ್ಟುವ ಮೂರು ಪಾಠಗಳು:
      a. ಕಳೆದು ಹೋದಕುರಿ (ಲೂಕ 15:3-7).
      b. ಕಳೆದು ಹೋದ ಪಾವಲಿ (ಲೂಕ 15:8-10).
      c. ಕಳೆದು ಹೋದ ಮಗ (ಲೂಕ 15:11-32).
    6. ಯೇಸು ಶಿಷ್ಯರ ಸಂಗಡ ಬಂದನು - ಅಪನಂಬಿಗಸ್ತನಾದ ಸೇವಕ (ಲೂಕ 16:1-13).
    7. ಫರಿಸಾಯರು ಯೇಸುವನ್ನು ಪರೀಕ್ಷಿಸಿದರು - ಐಶ್ವರ್ಯವಂಥ ಹಾಗೂ ಲಾಜರನ ಸಾಮ್ಯ (ಲೂಕ 16:14-31).

### ಪರಿಚಯ

"ಕಥೆಯನ್ನು ಹೇಳು" ಎಂಬ ಹೇಳಿಕೆಯನ್ನು ಯಾವ ತಂದೆ ತಾಯಿಗಳು ಕೇಳಿರುವದಿಲ್ಲ? ಕೆಲವು ದಿವಸಗಳ ಹಿಂದೆ, ನನ್ನ ಮೊಮ್ಮಕ್ಕಳು, "ನಮಗೆ ಕಥೆಯನ್ನು ಹೇಳು" ಎನ್ನುವಾಗ, ನನ್ನ ಮೊಮ್ಮಗಳಾದ ರೈಚಲ್ ನನ್ನ ತೊಡೆಯ ಮೇಲೆ ಕೂತುಕೊಂಡು: "ನನ್ನ ತಾತ ನನಗೆ ಕಥೆ ಹೇಳು ಎಂದಿದ್ದಳು."

ಅನೇಕರು ಕಥೆಗಳನ್ನು ಬಯಸುವಂತೆ, ಯೇಸು ಸಹ ಕಥೆಗಳನ್ನು ಹೇಳುತ್ತಿದ್ದನು. ಆತನ ಅನೇಕ ಬೋಧನೆಗಳು ಉತ್ತಮವಾದ ಕಥೆಗಳನ್ನು ಒಳಗೊಂಡಿದ್ದವು. ಅವುಗಳನ್ನು ನಾವು ಸಾಮ್ಯಗಳು[1] ಎನ್ನುತ್ತೇವೆ, ಪೆರಿಯದ[2] ಸೇವೆಯ ಸಂದರ್ಭದಲ್ಲಿ ಯೇಸು ಪ್ರಮುಖವಾದ ಸಾಮ್ಯಗಳನ್ನು[3] ಹೇಳಿದ್ದನು. ಇದರಲ್ಲಿ ದಾಖಲಾಗಿರುವ ಪ್ರಮುಖ ಸಾಮ್ಯಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಫರಿಸಾಯರಿಗಾಗಿ ಹೇಳಲಾಗಿದೆ (ಲೂಕ 14:1; 15:2; 16:14).

ಯಾವುದೇ ವಿಷಯಗಳನ್ನು ಯೇಸು ಸಾಮ್ಯದ ರೂಪದಲ್ಲಿ ವಿವರಿಸುತ್ತಿದ್ದನು ಅದರಲ್ಲಿ ಮುಖ್ಯವಾದ ಸಂದೇಶವಿರುತ್ತಿತ್ತು, ಈ ಪಾಠಗಳಲ್ಲಿ ಆತನು ತಿಳಿಸಿರುವ ಮದುವೆಯ ಭೋಜನ, ಕುರಿ ಹಾಗೂ ಪಾವಲಿ, ಕುಟುಂಬ ಜೀವಿತ ವಹಿವಾಟು, ಹಾಗೂ ಮರಣದ ನಂತರದ ಜೀವದ ಕುರಿತು ತಿಳಿಸಿದ್ದಾನೆ.

## ಮದುವೆಯ ಭೋಜನದಲ್ಲಿ ವರ್ತಿಸಬೇಕಾದ ರೀತಿಯ ಕುರಿತು ನನಗೆ ಕಥೆಗಳನ್ನು ಹೇಳು (ಲೂಕ 14:1-24)

ಯೇಸು ಗಲಿಲಾಯದಲ್ಲಿ ಫರಿಸಾಯನ ಸಂಗಡ (ಲೂಕ 7:36-50) ಯೂದಾಯದ ಫರಿಸಾಯನ ಸಂಗಡ (ಲೂಕ 11:37-54) ಊಟಮಾಡಿದ್ದನು. ಈಗ ಪೆರಿಯದ[4] ಫರಿಸಾಯನ ಸಂಗಡ ಊಟ ಮಾಡಲು ಕರೆಯಲ್ಪಟ್ಟನು (ನೋಡಿ ಲೂಕ 14:1, 12ಎ). ಇದು ಮೂರನೆಯ ಹಾಗೂ ಅಂತಿಮವಾದ ಕರೆ, ಅದನ್ನು ಯೇಸು ಒಪ್ಪಿಕೊಂಡಿದ್ದನು.[5]

ಈ ಹಿಂದೆ ಯೇಸು ಫರಿಸಾಯನ ಮನೆಯಲ್ಲಿ ಊಟ ಮಾಡಿದಾಗ, ಕರೆದವರ ಮನೋ ಭಾವದ ಬಗ್ಗೆ ಚರ್ಚಿಸಿದೆವು ಈಗ ನಾವುಗಳ ಊಹೆ ಮಾಡುವ ಅಗತ್ಯವಿಲ್ಲ. ಲೂಕನು ಬರೆದು ಅತನು ಸಬ್ಬತ್‌ದಿನದಲ್ಲಿ ಫರಿಸಾಯರ ಮುಖ್ಯಸ್ಥರಲ್ಲಿ ಒಬ್ಬನ ಮನೆಗೆ ಊಟಕ್ಕೆ ಹೊದಾಗ ಅವರು ಅತನನ್ನ ಹಂಚಿನೊಡುತ್ತಿದ್ದರು (ಲೂಕ 14:1; ನೋಡಿ ಲೂಕ 11:53, 54). ಈ ಸಂದರ್ಭವು ಯೇಸು ಸಬ್ಬತ್ ದಿನದ ಆಚಾರವನ್ನು ಮುರಿಯುವನೋ ಎಂದು "ಅವರು ತುಂಬಾ ಹತ್ತಿರ ನೋಟದಿಂದ ನೋಡುತ್ತಿದ್ದರು."

"ಜಲಧಾರ ರೋಗ"ವುಳ್ಳ (ಲೂಕ 14:2) ಒಬ್ಬನು ಭೋಜನ ಪಂಕ್ತಿಯಲ್ಲಿದ್ದನು. "ಜಲಧಾರ ರೋಗವು" ಶಾಲೀರದಲ್ಲಿ ನೀರಿಲ್ಲದಂತೆ ಮಾಡುವ ವೈದ್ಯಕೀಯ ಸ್ಥಿತಿಯನ್ನು ತೋಲಿಸುತ್ತದೆ.[6] ಹೃದಯಘಾತದ ಒಂದು ಸೂಚನೆಯಾಗಿದೆ.[7] ಈತನನ್ನು ಸಬ್ಬತ್ ದಿನದಂದು ಫರಿಸಾಯರು ಯೇಸು ಅವನನ್ನು ವಾಸಿಮಾಡುವನೋ ಇಲ್ಲವೋ ಎಂದು ನೋಡುವದಕ್ಕೆ ತಂದರು.

ಅತನನ್ನು ಯೇಸು ರೋಗಿಯನ್ನು ಗುಣಪಡಿಸುವದು ಮಾತ್ರವಲ್ಲದೆ, "ಸಬ್ಬತ್ ದಿನದಲ್ಲಿ ಸರ ಸ್ವಸ್ಥಮಾಡಬಾರದೋ? ಎಂದು ಹೇಳಿ ತನ್ನ ವೈರಿಗಳಿಗೆ ಆಶ್ಚರ್ಯ ಉಂಟುಮಾಡಿದನು (ವಚನ 3; ನೋಡಿ ಮಾರ್ಕ 3:4). ಈ ಹಿಂದಿನ ನಿದರ್ಶನವನ್ನೇ ಉಪಯೋಗಿಸಿರುವನು (ನೋಡಿ ಮತ್ತಾಯ 12:11). ಒಂದು ಮಗುವನ್ನು[8] ಅಥವಾ ಪ್ರಾಣಿಯನ್ನು[9] ಗುಂಡಿಯಿಂದ ಎತ್ತುವ ಸರಿಯಾದ ನಿದರ್ಶನವನ್ನು ಬಳಸಿದನು (ವಚನ 5). ಆತನು ಮಾಡಿದ ಚರ್ಚೆಯನ್ನು ಹೀಗೆ ವಿವರಿಸಬಹುದು: ನೀರಿನ ಗುಂಡಿಯಲ್ಲಿ ಬಿದ್ದಿರುವ ನಿಮ್ಮ ಮಗುವನ್ನು ಸಬ್ಬತ್ ದಿನದಲ್ಲಿ ಎತ್ತುವದು ನ್ಯಾಯಬದ್ಧವಾಗಿದ್ದರೆ, ಜಲರೋಗಿಯನ್ನು ಸಬ್ಬತ್ ದಿನದಲ್ಲಿ ಗುಣಪಡಿಸುವದು ನ್ಯಾಯಬದ್ಧವಲ್ಲವೇ? ಅವರು ಮೌನವಾಗಿದ್ದರು ಎಂದು ವಚನ 4ರಲ್ಲಿ ನೋಡುತ್ತೇವೆ. ಯೇಸು ಅವನನ್ನು ಮುಟ್ಟಿದಾಗ ಅವನ ಕೈವಾಸಿಯಾಗಿ ಮನೆಗೆ ಹೋದನು.

### ನಿಜವಾಗಿ ತಗ್ಗಿಸಿಕೊಳ್ಳಬೇಕು (14:7-11)

ಸಮಯೋಜಿತವಾದ ಉಪದೇಶವನ್ನು ಯೇಸು ಪ್ರಯೋಗಮಾಡಿದನು. ಇಲ್ಲಿ ಭೋಜನದ ವಿಚಾರವನ್ನು ನೋಡುತ್ತೇವೆ. ಊಟಕ್ಕೆ ಕರೆಸಿಕೊಂಡವರು ಪಂಕ್ತಿಯ ಮೊದಲ ಸ್ಥಾನವನ್ನು ಆರಿಸಿಕೊಳ್ಳುವದನ್ನು ಯೇಸು ಗಮನಿಸಿದನು (ವಚನ 7; ನೋಡಿ ಮತ್ತಾಯ 20:21; 23:6).[10] ಯಾರು ಗಮನಿಸಲಾರದ ಸ್ಥಳವನ್ನು ಆರಿಸಿಕೊಳ್ಳಬೇಕು ಎಂದು ಯೇಸು ಸಲಹೆ ನೀಡಿದನು (ವಚನಗಳು 8-10). ಜೀವಿತಕ್ಕೆ ಅಗತ್ಯವಿರುವ "ಸಾಮ್ಯ" ಇದಾಗಿದೆ (ವಚನ 7): "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ವಚನ 11; ನೋಡಿ ಲೂಕ 18:14; ಮತ್ತಾಯ 23:12).

### ನಿಜವಾದ ಅತಿಥಿ ಸತ್ಕಾರ ಮಾಡಿರಿ (14:12-14)

ಅತಿಥಿಗಳು ಗೌರವವನ್ನು ಹಿಂದಿರುಗಿಸುವರು ಎಂಬ ಭಾವದಿಂದ ಅತಿಥಿ ಸತ್ಕಾರ ಮಾಡಬಾರದು (ವಚನ 12). ಆತನು ಆ ಮನುಷ್ಯನಿಗೆ - "ಆದರೆ ನೀನು ಔತಣ ಮಾಡಿಸು ವಾಗ ಊನವಾದವರು ಕುಂಟರೂ ಕುರುಡರೂ ಇಂಥವರನ್ನು ಕರೆ; ಅವರು ನಿನಗೆ

ಮುಯ್ಯಿಗೆ ಮುಯ್ಯಿ ತೀರಿಸಲಾರರು" (ವಚನಗಳು 13, 14ಎ).[11] ಈ ನಿದರ್ಶವು ಊಟಕ್ಕೆ ಕರೆದವರಿಗೂ ಹಾಗೂ ಕೇವಲ ಸ್ನೇಹಿತರನ್ನು ಮತ್ತು ಇತರರನ್ನು ಮಾತ್ರ ಕರೆಯುವ ನಮಗೂ ಸಂಬಂಧಪಟ್ಟಿರುತ್ತದೆ (ನೋಡಿ ಮತ್ತಾಯ 5:46, 47; ಲೂಕ 6:32, 33).

**ನಿಜವಾದ ವಿಧೇಯರಾಗಿರಿ (14:15-24)**

ನಿಜವಾದ ಅತಿಥಿ ಸತ್ಕಾರ ಮಾಡುವವರಿಗೆ, "ಜೀವಿತರಾಗಿ ಎದ್ದು ಬರುವಲ್ಲಿ ನಿನಗೆ ಮುಯ್ಯಿಗೆ ಮುಯ್ಯಿಯಾಗುವದು"[12] (ವಚನ 14ಬಿ). ಅಲ್ಲಿದ್ದ ಒಬ್ಬ ಅತಿಥಿಯು ಮುಂದೆ ಬರಲಿದ್ದ ಮೆಸ್ಸೀಯನ ರಾಜ್ಯ ಎಂದು ಭಾವಿಸಿ,[13] ದೇವರ ರಾಜ್ಯದಲ್ಲಿ ಊಟಮಾಡುವವನೇ ಧನ್ಯನು ಎಂದು ಹೇಳಿದನು (ವಚನ 15). ಕ್ರಿಸ್ತನು ಅವನಿಗೆ ಔತಣದ ಸಾಮ್ಯದ ಮುಖಾಂತರ ಪ್ರತಿಕ್ರಿಯಿಸಿದನು.[14] ಔತಣಕ್ಕೆ ಬಾರದವರು ಅನೇಕ ಕಾರಣಗಳನ್ನು ನೀಡಿದರು (ವಚನಗಳು 16-21). ಆಗ ಯಜಮಾನನು ತನ್ನ ಆಳುಗಳಿಗೆ ಬಡವರು,[15] ಅವಕಾಶವಿಲ್ಲದವರನ್ನು ಕರೆಯಿರಿ ಅಂದನು (ವಚನಗಳು 21-23; ವಚನ 13ನ್ನು ಹೋಲಿಸಿ).

ಸಾಮ್ಯದಿಂದ ಅನೇಕ ಪಾಠಗಳನ್ನು ಕಲಿಯಬಹುದಾದರೂ, ವಚನ 24ರಲ್ಲಿ ಕರ್ತನ ನೀಡಿರುವ ಪ್ರಮುಖ ಉದ್ದೇಶವನ್ನು ಗಮನಿಸಬಹುದು. ಯಜಮಾನನು ತನ್ನ ಆಳಿಗೆ, ಊಟಕ್ಕೆ ಹೇಳಿಸಿಕೊಂಡವರಲ್ಲಿ ಒಬ್ಬನಾದರೂ ತಾನು ಮಾಡಿಸಿದ ಅಡಿಗೆಯ ಸವಿಯನ್ನು ನೋಡ ಬಾರದು. "ಪರಲೋಕದಲ್ಲಿ ಊಟಮಾಡುವೆವು. ಎನ್ನುವವರು ಸಹ ಊಟ ಮಾಡಲಾರರು!" ಯಾಕಂದರೆ ಅವರು ದೇವರು ನೀಡಿದ ಆಹ್ವಾನವನ್ನು ತಿರಸ್ಕರಿಸಿದ್ದಾರೆ. ಆ ಆಹ್ವಾನವು ದೇವರ ರಾಜ್ಯದ ಒಂದು ಭಾಗವೆಂದು ಅವರು ತಿಳಿಯಲಿಲ್ಲ. ಅವರು ಯೇಸುವನ್ನು ದೇವರ ಮಗನೆಂದು ಅಲ್ಲಗಳೆದರು.

ಸಾಮ್ಯವು ನಮಗೆ ಅನೇಕ ಪಾಠಗಳನ್ನು ಕಲಿಸುತ್ತದೆ: ಕರ್ತನು ಕರೆಯುವಾಗ ಆತನ ಪ್ರೀತಿಯ ಕರೆಯನ್ನು ನಿರಾಕರಿಸಬೇಡ (ಮತ್ತಾಯ 11:28), ಕಾರಣ ನೀಡಬೇಡ, ಆದರೆ ಆತನ ಪ್ರೀತಿಗೆ ಒಮ್ಮೆಯೇ ಉತ್ತರ ನೀಡು! ಆಗ, ಮಾತ್ರ, ಆತನು ನೀಡುವ ಆತ್ಮೀಕ ಹಬ್ಬವನ್ನು ಆನಂದಿಸಬಹುದು (ಪ್ರಕಟಣೆ 3:20).

## ಮನೆಗಳನ್ನು ಕಟ್ಟು ಹಾಗೂ ಹೋರಾಟ ಮಾಡುವ ಕಥೆಯನ್ನು ನನಗೆ ಹೇಳು (ಲೂಕ 14:25-35)

ಗಲಿಲಿಯಾದ ಆದಿ ಸೇವೆಯ ಸಂದರ್ಭದಲ್ಲಿ ಜನರು ಗುಂಪು ಗುಂಪಾಗಿ ಯೇಸುವನ್ನು ಹಿಂಬಾಲಿಸಿದರು (ಮತ್ತಾಯ 4:25). "ಈಗ ಪೆರಿಯದಲ್ಲಿಯೂ ಜನರು ಗುಂಪಾಗಿ ಆತನ ಸಂಗಡ ಹೋದರು" (ಲೂಕ 14:25). ಮೆಸ್ಸೀಯನ ಕುರಿತ ಆನಂದವು ವೃದ್ಧಿಯಾಗುತ್ತಿತ್ತು.[16] ಆ ಆನಂದದ ಕುರಿತು ಯಸು ಮುಂದುವರೆಸಲು ಯತ್ನಿಸುವಾದ ಆ ಗುಂಪಿನವರು ಶಿಷ್ಯತ್ವದ ಮಹತ್ವವನ್ನು ಅರಿಯದಾದರು (ವಚನಗಳು 26, 27).[17]

"ಲೆಕ್ಕಾಚಾರದ" ಕುರಿತು ಆತನು ಎರಡು ಸಾಮ್ಯಗಳನ್ನು ಹೇಳಿದನು: ಕಟ್ಟಡ ಕಟ್ಟುವ ಮೊದಲು, ಅದಕ್ಕೆ ತಗಲುವ ವೆಚ್ಚದ ಲೆಕ್ಕಾಚಾರ ಮಾಡಬೇಕು (ವಚನಗಳು 28-30). ಅದೇ ರೀತಿಯಲ್ಲಿ ಯುದ್ಧಕ್ಕೆ ಹೋಗುವ ಮೊದಲು ಅದಕ್ಕೆ ಆಗುವ ವೆಚ್ಚವನ್ನು ಲೆಕ್ಕಿಸಬೇಕು[18] (ವಚನಗಳು 31, 32). ಹಾಗೆಯೇ (ವಚನ 33)ರಲ್ಲಿ[19] ಶಿಷ್ಯತ್ವದ ಬೆಲೆ ಏನು ಎಂದು ತಿಳಿಸಲಾಗಿದೆ. ಇದರ ಕುರಿತು ಈ ಹಿಂದೆಯೇ ಉಪ್ಪಿನ ಸಾಮ್ಯವನ್ನು ಹೇಳಿರುವನು. ಆತನನ್ನು ಹಿಂಬಾಲಿಸುವ ನಿರ್ಧಾರ ಒಳ್ಳೆಯದೇ, ಆದರೆ ಅದಕ್ಕಾಗಿ ಅಗತ್ಯವಿರುವ ತ್ಯಾಗವನ್ನು ಮಾಡದೆ ಹೋದರೆ, ರುಚಿಕಳಕೊಂಡ ಉಪ್ಪಿನಂತಾಗುವರು ಅದು ಯಾವ ಪ್ರಯೋಜನಕ್ಕೂ ಬಾರದು (ವಚನಗಳು 34, 35; ನೋಡಿ ಮತ್ತಾಯ 5:13; ಮಾರ್ಕ 9:50).

## ಕಳೆದು ಹೋದ ಕುರಿ, ಪಾವಲಿ, ಹಾಗೂ ಹುಡುಗರನ್ನು ಹುಡುಕಿದ ಕಥೆಯನ್ನು ನನಗೆ ಹೇಳಿರಿ (ಲೂಕ 15:1-32)

ಸುಂಕುದವರು, ಪಾಪಿಗಳು ಯೇಸುವಿನ ವಾರ್ತೆಯನ್ನು ಕೇಳುತ್ತಿದ್ದರು (ವಚನ 1; ನೋಡಿ ಲೂಕ 7:34). ಎಲ್ಲರೂ "ಪಾಪ" ಮಾಡಿರುವದರಿಂದ (ರೋಮಾಪುರ 3:23), ಆದರೆ "ಪಾಪಿ" ಎಂಬ ಪದವು ಎಚ್ಚರಿ ಉಂಟುಮಾಡುತ್ತದೆ. ಆದರೆ "ಪಾಪಿಗಳು" ಎಂಬ ಪದವನ್ನು ಫರಿಸಾಯರು ಜನರಿಗಾಗಿ ಉಪಯೋಗಿಸುತ್ತಿದ್ದರು.

ಸಮಾಜದಿಂದ ತಿರಸ್ಕಾರ ಹೊಂದಿದವರನ್ನು ಯೇಸು ತಿರಸ್ಕರಿಸಲಿಲ್ಲ, ಅವರೊಂದಿಗೆ ರೊಟ್ಟಿ ಮುರಿದನು (ನೋಡಿ ಮತ್ತಾಯ 9:10, 11).[20] ಇದರ ನಿಮಿತ್ತ ಸದ್ದುಕಾಯರು ಹಾಗೂ ಫರಿಸಾಯರು ಗುಣಗಿದರು, "ಇವನು ಪಾಪಿಗಳನ್ನು ಸೇರಿಸಿಕೊಂಡು ಅವರ ಜೊತೆಯಲ್ಲಿ ಊಟ ಮಾಡುತ್ತಾನೆ ಅಂದನು" (ಲೂಕ 15:2). ಅವರ ಕಠಿಣ ಹೃದಯದ ನಿಮಿತ್ತ ಯೇಸು ಉತ್ತಮವಾದ ಮೂರು ಸಾಮ್ಯಗಳನ್ನು ಹೇಳಿದನು.

### ಕಳೆದು ಹೋದದ್ದು ಸಿಕ್ಕಿತು (15:1-24)

ಮುಂದಿನ ಸಾಮ್ಯದಲ್ಲಿ ಕುರಿಯನ್ನು ಕಳಕೊಂಡ ಒಬ್ಬ ಕರುಬನು ಅವನು ಪಡೆದು ಕೊಂಡಾಗ, ಅವನಿಗೆ ಉಂಟಾದ ಆನಂದದ ಕುರಿತಾಗಿರುತ್ತದೆ (ವಚನಗಳು 3-6).[21] ಅದರಂತೆ, "ದೇವರ ಕಡೆಗೆ ತಿರುಗಿ ಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವಾಗುವದೆಂದು ನಿಮಗೆ ಹೇಳುತ್ತೇನೆ"[22] (ವಚನ 7). ಕಳೆದುಹೋದ ಪಾವಲಿಯು ಸಿಕ್ಕಿದಾಗ ಆ ಹೆಂಗಸು ಆನಂದಿಸಿದಳು (ವಚನಗಳು 8, 9).[23] ಅದರಂತೆ, "ಒಬ್ಬ ಪಾಪಿಯ ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ದೇವದೂತರ ಮುಂದೆ ಸಂತೋಷವಾಗು ವದೆಂದು ನಿಮಗೆ ಹೇಳುತ್ತೇನೆ" (ವಚನ 10). ನಂತರ ಆತನು "ತಪ್ಪಿಹೋದ ಮಗನ ಸಾಮ್ಯ ಹೇಳಿದನು."[24] ಈ ಪ್ರೀತಿಯ ಸಾಮ್ಯದ ಕುರಿತು ಜಾನ್ F. ಕಾರ್ಟರ್‌ರವರು ಬರೆದು,

> ಪಾಪದ ನಿಮಿತ್ತವಾಗಿ ಬೇಸತ್ತ ಸಾವಿರಾರು ಪಾಪಿಗಳು ಈ ಕಥೆಯ ಮೂಲಕ ತಮ್ಮನ್ನು ಕರುಣೆಯುಳ್ಳ ದೇವರಿಗೆ ತಮ್ಮ ಜೀವಿತವನ್ನು ಸಮರ್ಪಿಸಿದ್ದಾರೆ. ಇದರಿಂದ ಅವರು ಪಾಪಕ್ಷಮೆ ಹಾಗೂ ದೈವೀಕ ಪ್ರವೇಶವನ್ನು ಮಾತ್ರ ಪಡೆಯದೆ ಜಯಭರಿತವಾದ ಜೀವಿತವನ್ನು ಜೀವಿಸಲು ಭಲವನ್ನು ಹೊಂದಿದ್ದಾರೆ.[25]

ತಪ್ಪಿಹೋದ ಮಗನು ಹಿಂದಿಗಿರುಗಿದಾಗ ಅಲ್ಲಿ ಮಹಾ ಸಂತೋಷವಾಗಿತ್ತು (ವಚನ 24).

### ಹೆಮ್ಮೆಯಲ್ಲಿ ಕಳೆದು ಹೋದವನು (15:25-32)

ಕಳೆದು ಹೋದವನು ಹಿಂದಿರುಗಿದಾಗ ಉಂಟಾದ ಆನಂದವನ್ನು ಮಾತ್ರ ಹೇಳುತ್ತೇವೆ; ಅದು ಒಂದು ಸ್ವಾಭಾವಿಕವಾದ ಅಂತ್ಯ ಆದರೆ ಯೇಸು ಅದನ್ನು ಅಲ್ಲಿಗೆ ಅಂತ್ಯಗೊಳಿಸಲಿಲ್ಲ. ತಂದೆಯು ತನ್ನ ಹಿರಿಯ ಮಗನೊಂದಿಗೆ ಮಾಡಿದ ಚರ್ಚೆಯು ಪ್ರಮುಖವಾಗಿದೆ (ವಚನಗಳು 25-30).[26] ಹಿರಿಯ ಮಗನು ಫರಿಸಾಯನಿಗೆ ಹೋಲಿಕೆಯಾಗಿರುವನು - ಆದರೆ ತಪ್ಪಿಹೋದವನು ಹಿಂದಿರುಗಿ ಬಂದಾಗ ಯಾರಲ್ಲಿ ಆನಂದವು ಉಂಟಾಗುವುದಿಲ್ಲವೋ, ಅವರಿಗೂ ಹೋಲಿಸಿರುವನು. ತಂದೆಯು ತನ್ನ ಹಿರಿಯ ಮಗನಿಗೆ ಹೇಳಿದ ಮಾತಿನಲ್ಲಿ ನಮ್ಮ ಮನೋಭಾವವು ಅಡಗಿದೆ: "ಸತ್ತವನ್ನು ಬದುಕಿ ಬಂದನು ಹಾಗು ಕಳೆದು ಹೋದವನು ಸಿಕ್ಕಿದನು" (ವಚನ 32).

# ಹಣವನ್ನು ಯಾವ ರೀತಿ ಉಪಯೋಗಿಸಬೇಕು ಎಂಬುದರ ಕಥೆಯನ್ನು ನನಗೆ ಹೇಳು (ಲೂಕ 16:1-13)

## ಅನೀತಿಯ ಮನೆವಾರ್ತೆಯವನು (16:1-9)

ನಂತರ, ಯೇಸು ತನ್ನ ಶಿಷ್ಯರಿಗೆ (ವಚನ 1), ಒಬ್ಬ ಕೆಟ್ಟ ಮನೆವಾರ್ತೆಯವನ ಸಾಮ್ಯವನ್ನು ಹೇಳಿದನು.[27] "ವ್ಯವಸ್ಥಾಪಕ" ಎಂಬ ಪದದ ಬದಲು "ಮನೆವಾರ್ತೆ" ಎಂಬ ಪದ ಬಳಕೆಯಾಗಿದೆ, ಮನೆವಾರ್ತೆಯವನು ಮತ್ತೊಬ್ಬನ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದನು (ನೋಡಿ ಲೂಕ 12:41-48; 1 ಕೊರಿಂಥ 4:2).

ಮನೆವಾರ್ತೆಯವನ ಸಾಮ್ಯವು ಅಸಹಜವಾಗಿದೆ. ಹೊರತೋರಿಕೆಗೆ ಅವನ ಕಾರ್ಯ ಯೋಗ್ಯವಾದದ್ದಾಗಿ ಕಂಡರೂ, ಹಿನ್ನೆಲೆ ಕೆಟ್ಟದ್ದಾಗಿದೆ.[28] ಮನೆವಾರ್ತೆಯವನು ತನ್ನವಶದಲ್ಲಿದ್ದವನು ದುರುಪಯೋಗ ಮಾಡಿದನು (ವಚನ 1). ಹಾಗೂ ಯಜಮಾನನ ಶಾಪಕ್ಕೆ ಒಳಗಾಗುವವನಿದ್ದನು (ವಚನ 2).[29] ತಕ್ಷಣವೇ ಅವನು ಸಾಲಗಾರರನ್ನು ಕರೆದರು, ಅವರ ಸಾಲಗಳನ್ನು ಕಡಿಮೆ ಮಾಡಿದನು (ವಚನಗಳು 5-7). ಯಾಕೆಂದರೆ ಅವನು ಕೆಲಸದಿಂದ ತೆಗೆದು ಹಾಕಲ್ಪಡುವಾಗ, ಸಾಲಗಾರರ ಸ್ನೇಹವು ಅವನೊಂದಿಗಿರುತ್ತಿತ್ತು (ವಚನ 4). ಯಜಮಾನನು, ಆ ಮನೆವಾರ್ತೆಯವನಿಗೆ ಜಾಣತನ ಮಾಡಿದನು ಎಂದು ಹೊಗಳಿದನು (ವಚನ 8ಎ).[30]

ಯೇಸು ಅಪ್ರಮಾಣಿಕತೆಯನ್ನು ಮತ್ತು ಅನರ್ಹ ಮನೆವಾರ್ತೆಯನ್ನು ಪ್ರೋತ್ಸಾಹಿಸುತ್ತಿದ್ದಾನೆಯೇ? ಖಂಡಿತಾಗಿಯೂ ಇಲ್ಲ (ಗಮನಿಸಿ 16:17). ಈ ಅಂಶವನ್ನು ವಚನ 8ರ ಅಂತ್ಯದಲ್ಲಿ ಗಮನಿಸಬಹುದು: "ಯಾಕಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದರಿಗಿಂತಲೂ ಜಾಣರಾಗಿದ್ದಾರೆ." ಇದನ್ನು ಇನ್ನೊಂದು ರೀತಿ ಹೇಳುವದಾದರೆ, ಆತ್ಮೀಕ ಜನರು, ಆತ್ಮೀಕ ಸಾಧನೆ ಮಾಡುವದಕ್ಕಿಂತಲೂ, ದೇವ ಭಕ್ತಿಯಿಲ್ಲವದರು, ದೇವ ಭಕ್ತಿ ಇಲ್ಲದ ಕಾರ್ಯಗಳನ್ನು ಸಾಧಿಸುತ್ತಾರೆ.

ಅಪ್ರಮಾಣಿಸನಾದ ಮನೆವಾರ್ತೆಯವನು ಹಣದೊಂದಿಗೆ ಸ್ನೇಹ ಬೆಳಸಿದ್ದನು. ಆದ್ದರಿಂದ ಕ್ರಿಸ್ತನು, "... ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ; ಹೀಗೆ ಮಾಡಿದರೆ ಅದು ನಿಮ್ಮ ಕೈ ಬಿಟ್ಟು ಹೋಗುವಾಗ,[31] ಅವರು ನಿಮ್ಮನ್ನು ಶಾಶ್ವತವಾದ ವಾಸ ಸ್ಥಾನಗಳಲ್ಲಿ ಸೇರಿಕೊಳ್ಳುವರು" (ವಚನ 9). ಅಗತ್ಯವಿರುವವರಿಗೆ ಆರ್ಥಿಕ ನೆರವು ನೀಡಿ ಸ್ನೇಹಿತರನ್ನಾಗಿ ಮಾಡಿಕೊಳ್ಳಬಹುದು. ಯೇಸುವಿನ ಪ್ರಕಾರ, ಇತರರಿಗೆ ನೀಡುವ ಮೂಲಕ ನಾವುಗಳು ಪರಲೋಕದಲ್ಲಿ ಗಂಟು ಮಾಡುವದು, ಮಾತ್ರವಲ್ಲದೆ, ನಮ್ಮಿಂದ ಸಹಾಯ ಪರಲೋಕದಲ್ಲಿ ಕಾಣಬಹುದಾಗಿದೆ. ಇಲ್ಲಿ ಲೂಕ 12:33ರ ಕಥೆಯನ್ನು ಹೇಳಲಾಗಿದೆ: "ನಿನ್ನಲ್ಲಿರುವದನ್ನು ಮಾರಿ ಬೇರೆಯವರಿಗೆ ನೀಡು, ಆದ್ದರಿಂದ ಪರಲೋಕದಲ್ಲಿ ನಿಖರವಾದ ಗಂಟುಮಡಿಕೊಳ್ಳಬಹುದು."[32]

## ನೀತಿವುಳ್ಳ ವ್ಯವಸ್ಥೆ (16:10-13)

ಮುಖ್ಯವಾಗಿ ಹಣದ ವಿಚಾರದಲ್ಲಿ ನಂಬಿಕೆಯನ್ನು ಪ್ರದರ್ಶಿಸಬೇಕು ಎಂಬ ತತ್ವವನ್ನು ಯೇಸು ಸಾಮ್ಯದ ಮೂಲಕ ಪುನಚ್ಚರಿಸುತ್ತಿದ್ದಾನೆ (ವಚನಗಳು 10-12). ಹಣವು ನಿನಗೆ ಯಜಮಾನನಾಗಿರಬಾರದು ಎಂದು ಎಚ್ಚರಿಸಿರುವನು (ವಚನಗಳು 13; ನೋಡಿ ಮತ್ತಾಯ 6:24). ತಾನು ಬೋಧಿಸಲಿದ್ದ ವಿಚಾರದ ಮುನ್ನಡಿಯನ್ನು ನೀಡಿ, "ಫರಿಸಾಯರ ಹುಳಿಯ ವಿಚಾರದಲ್ಲಿ ಎಚ್ಚರವಾಗಿರ್ರಿ" (ಲೂಕ 12:1), "ಅವರು ... ಹಣದಾಶೆವುಳ್ಳವರಾಗಿದ್ದರು" (ಲೂಕ 16:14), ಐಶ್ವರ್ಯವಂತರಾಗಿರುವದು, ವಿವಾದವಿಲ್ಲದ ದೇವರ ಒಪ್ಪಿಗೆ ಎಂದು ಭಾವಿಸಿದ್ದರು.

## "ನರಕದಿಂದ" ದೂರವಿರುವ ಕುರಿತ ಕಥೆಯನ್ನು ನನಗೆ ಹೇಳಿರಿ (ಲೂಕ 16:14-31)

ಯೇಸುವಿನ ಪ್ರಕಾರ ಹಣ ಸಂಪಾದನೆಯಲ್ಲಿ ಲೋಕದಲ್ಲಿ ಪ್ರಮುಖವಲ್ಲ. ಫರಿಸಾಯರು ಈ ಮಾತುಗಳನ್ನೆಲ್ಲಾ ಕೇಳಿ ಅತನನ್ನ ಹಾಸ್ಯಮಾಡಿದರು (ವಚನ 14).[33] NASBಯು ಪ್ರಕಾರ ಅವರು ಅತನನ್ನ "ಫರಿಹಾಸ್ಯ" ಮಾಡಿದರು NIVಯು ಪ್ರಕಾರ ಅತನನ್ನು "ಸಂದೇಹದಿಂದ" ನೋಡಿದರು. ಜನರು ಮುಂದೆ ಅತನನ್ನ ಅವಮಾನಿಸಲು ಯತ್ನಿಸಿದರು.

### ದ್ವೇಷದಿಂದ ಕೂಡಿದ ಐಶ್ವರ್ಯವಂತರು (16:15-18)

ಅವರು ನೆನಪಿಡುವಂಥ ಪ್ರತಿಕ್ರಿಯೆಯನ್ನು ಯೇಸು ನೀಡಿದನು:[34]

- ಮನುಷ್ಯರ ಮುಂದೆ ತಮ್ಮನ್ನು ನೀತಿವಂತರೆಂದು ಅವರು ತೋರ್ಪಡಿಸಿ, ಕೊಂಡಿದ್ದರಿಂದ ಅವರನ್ನು ಗದರಿಸಿದನು (ವಚನ 15).
- ಮನುಷ್ಯರ ನೀತಿ ನಿಯಮಗಳಿಂದ ದೇವರ ರಾಜ್ಯಕ್ಕೆ ಸೇರಬೇಕು ಎಂಬ ತತ್ವವನ್ನು ಅತನು ಅಲ್ಲಾಗಳೆದನು (ವಚನ 16).[35]
- ನಾಶವಾಗದ ವಾಕ್ಯವನ್ನು ಅವಲಂಭಿಸುವ ಬದಲು, ಮನುಷ್ಯರ ಸಂಪ್ರದಾಯಗಳಿಗೆ ಹೆಚ್ಚು ಮಾನ್ಯತೆ ನೀಡಿದ್ದರಿಂದ, ಅವರನ್ನು ಖಂಡಿಸಿದನು (ವಚನಗಳು 17, 18).[36]

### ನರಕದಲ್ಲಿರುವ ಐಶ್ವರ್ಯವಂತನು (16:19-31)

ಅವರನ್ನು ಗದರಿಸಿದ ನಂತರ ಆತನು ಮತ್ತೊಂದು ಸಾಮ್ಯವನ್ನು ಹೇಳಿದನು. ಅಪನಂಬಿಗಸ್ತನಾದ ಮನೆವಾರ್ತೆಯವನ ಸಾಮ್ಯವು ಪರಿಸಾಯರಲ್ಲಿ ಗೊಂದಲ ಉಂಟುಮಾಡಿದಾಗ, ಮುಂದಿನ ಸಾಮ್ಯಗಳು ಅವರನ್ನು ನಿರಾಸಕ್ತರನ್ನಾಗಿ ಮಾಡಿದನು. ಈಗ ಆತನು *ಶ್ರಿಮಂತನ* ಸಾಮ್ಯವನ್ನು ಹೇಳಿದನು.

ಲೂಕ 16:19-31 ಇದನ್ನು "ಶ್ರೀಮಂತ[37] ಹಾಗೂ ಲಾಜರನ ದೃಷ್ಟಾಂತವಾಗಿದೆ." ಆ ಶ್ರಿಮಂತನು ಅಪನಂಬಿಗಸ್ತನಾಗಿದ್ದನು. ಭಿಕ್ಷುಕನಾದ ಲಾಜರನಿಗೆ ಸಹಾಯ ಮಾಡುವಂಥ ಅವಕಾಶವನ್ನು ಅವನು ಕಳಕೊಂಡನು.[38] ಭಿಕ್ಷುಕನು ಸತ್ತಾಗ ದೇವದೂತರು ಅವನನ್ನು ತೆಗೆದುಕೊಂಡು ಹೋಗಿ, "ಅಬ್ರಹಾಮನ ಎದೆಗೆ ಒರಗಿಸಿದರು" (ವಚನ 22); ಶ್ರಿಮಂತನು ಸತ್ತಾಗ ಪಾತಾಳದಲ್ಲಿ "ಯಾತನೆ ಪಟ್ಟನು" (ವಚನ 23).

ಆಗ ಐಶ್ವರ್ಯವಂತನು ಲಾಜರನನ್ನು ತನ್ನ ಐದು ಜನ ಸಹೋದರರ ಬಳಿಗೆ ಕಳುಹಿಸಬೇಕೆಂದು ಬೇಡಿಕೊಂಡನು. ಆದರೆ ಅವರಿಗೆ, "ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಇವೆ ಎಂದು ಹೇಳಲಾಯಿತು ..."; "ಮೋಶೆಯು ಹಾಗೂ ಪ್ರವಾದಿಗಳ ಮಾತನ್ನು ಕೇಳದವರು, ಸತ್ತು ಎದ್ದು ಬಂದವನ ಮಾತನ್ನು ಕೇಳಲು ಅಸಾಧ್ಯ" (ವಚನಗಳು 29, 31). ಈ ಮಾತುಗಳು ಫರಿಸಾಯರಿಗೆ ವಿಶೇಷವಾದ ಎಚ್ಚರಿಕೆಯನ್ನು ನೀಡಿತು: ಯೇಸುವಿನ ಬಗ್ಗೆ ಸಾಕ್ಷಿ ನೀಡಿದ ಮೋಶೆಯು ಹಾಗೂ ಪ್ರವಾದಿಗಳ ಮಾತುಗಳು ಅವರ ಬಳಿಯಲ್ಲಿದ್ದರೂ (ವಚನ 24:44), ಅವರ ಮಾತನ್ನು ಫರಿಸಾಯರು ಕೇಳಲಿಲ್ಲ. ಆದ್ದರಿಂದ ಯೇಸು ಮರಣದಿಂದ ಎಬ್ಬಿಸಿದ ಘಟನೆಯನ್ನು ಅವರು ತಿರಸ್ಕರಿಸಿದರು (ಲೂಕ 7:11-17; 8:41-56; ನೋಡಿ ಯೋಹಾನ 11:1-53; 12:9-11). ಮುಂದೆ ಯೇಸು ತಾನೇ ಮರಣದಿಂದ ಎದ್ದು ಬರುವಂತ ವಿಚಾರವನ್ನು ಅವರು ಹಿಂಬಾಲಿಸಬೇಕಿತ್ತು (ಮತ್ತಾಯ 28:11-15; ಅಪೊಸ್ತಲರ ಕೃತ್ಯಗಳು 4:1-22).

ಲೂಕ 16:29-31ರ[39] ವಾಕ್ಯವನ್ನು ಗ್ರಹಿಸದೆ ಹೋದವರು, ಈ "ಸಾಮ್ಯ"ಕ್ಕೆ ಹೆಚ್ಚು

ಮಾನ್ಯತೆ ನೀಡು ಸಾಧ್ಯತೆಯಿದೆ. ಇವುಗಳು ಮನಸ್ಸಿನಲ್ಲಿರಲಿ:

(1) ಈ ಕಥೆಯನ್ನು ಸತ್ಯವೇದವು ಸಾಮ್ಯವೆಂದು ಕರೆಯುವದಿಲ್ಲ. ಇದು ಸಾಮ್ಯವಾಗಿದ್ದರೆ, ಇದರಲ್ಲಿ ಮಾತ್ರ ಮುಖ್ಯ ವ್ಯಕ್ತಿಯ ಹೆಸರನ್ನು (ಲಾಜರಸ) ಹೆಸರಿಸಲಾಗಿದೆ. ಇದನ್ನು ಸಹಜ ವಾದ ಸಾಮ್ಯವೆಂದು ಪರಿಗಣಿಸಿರುವದಿಲ್ಲ. ಈಗಾಗಲೇ ತಿಳಿಸಿರುವಂತೆ ಇದನ್ನು ಸಹಜ "ಸಾಮ್ಯವೆಂದು" ಸತ್ಯವೇದದಲ್ಲಿ ತಿಳಿಸಿದೆ; ಕೆಲವು ಬಾರಿ ಇದು "ದೃಷ್ಟಾಂತ" ಎಂದು ಪರಿಗಣಿಸಿದೆ (14:7-10). ಐಶ್ವರ್ಯವಂತನ ಹಾಗೂ ಭಿಕ್ಷುಕನಾದ ಲಾಜರನ "ಸಾಮ್ಯ" ಎಂದು ಕರೆಯಬಹುದಾಗಿದೆ. ಇದು ಮನುಷ್ಯರಾದ ನಾವೇ ನೀಡಿರುವ ತಲೆಬರಹವಾಗಿದೆ.

(2) ಈ ಕಥೆಯನ್ನು "ಸಾಮ್ಯ" ಎಂದರೂ, ಇದನ್ನು ನಾವು "ಕಲ್ಪನಾ ಕಥೆಯಲ್ಲ." J. W. McGarvey ಯವರು ಇದನ್ನು ಕುರಿತು, "ಯೇಸುವಿನ ಸಾಮ್ಯಗಳು ಯಾವುದೇ ವಿಧವಾದ ಕಲ್ಪನೆಗಳಾಗಿರುವದಿಲ್ಲ, ಮತ್ತು ಸಹಜತ್ವವನ್ನು ಮೀರಿರುವದಿಲ್ಲ."[40] ಲೂಕ 16:19-31ರ ವಿಚಾರವು ಮರಣದ ನಂತರ ಆತ್ಮದ ಪರಿಸ್ಥಿತಿಯ ಕುರಿತು ಯಾವುದೇ ಸಂದೇಹವನ್ನು ವ್ಯಕ್ತಪಡಿಸುವದಿಲ್ಲ: "ನಾಶವಾದವರ, ಶಾಪದ ಪರಿಸ್ಥಿತಿಯನ್ನು ಹಾಗೂ ರಕ್ಷಣೆ ಹೊಂದಿದವರ ಆಶೀರ್ವಾದ ಪರಿಸ್ಥಿತಿಯನ್ನು ಸ್ಪಷ್ಟಪಡಿಸುತ್ತದೆ. ಜೀವಿಸಿದವರಲ್ಲಿ" (ಯೋಹಾನ 1:1, 2, 14), "ಯೋಹಾನನು ಮಾತ್ರ ಮರಣದ ನಂತರ ಮನುಷ್ಯನು ಅನುಭವವನ್ನು ತಿಳಸಿರುತ್ತಾರೆ."[41]

## ಮುಕ್ತಾಯ

ಇದನ್ನು ವ್ಯಕ್ತಿಗತವಾಗಿ ಅಳವಡಿಸಿಕೊಂಡರೆ, ನಮ್ಮ ಜೀವಿತದ ಮೇಲೆ ಅವುಗಳು ಪರಿಣಾಮ ಬೀರುತ್ತವೆ. ಉದಾಹರಣೆ: ನಾವು ಕರೆಯದೆ ಇರುವ ಅಥವಾ ಕರೆಗೆ ಯೋಗ್ಯರಲ್ಲ. ಎಂಬುವ ಜನರನ್ನು ನಮ್ಮ ಮನೆಗಳಿಗೆ ಆಹ್ವಾನಿಸಬಹುದು. "ನಾನು ಪಾಪಿಗಳ ಸ್ನೇಹಿತನೇ?" ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬಹುದು. ಪ್ರಾಯಶಃ ಅಂಥವರನ್ನು ಆಹ್ವಾನಿಸಲು ನಾವುಗಳು ಈ ವಾರದಲ್ಲಿ ಸಿದ್ಧರಾಗಬಹುದು.[42] ಈ ಸಾಮ್ಯವು ನಮ್ಮಲ್ಲಿ ಪ್ರಭಾವ ಬೀರದಿದ್ದರೆ (ಲೂಕ 14:16-24), "ನಾನು ಕರ್ತನ ಆಹ್ವಾನವನ್ನು ಒಪ್ಪಿದ್ದೇನೋ?" ಎಂದು ಕೇಳಿಕೊಳ್ಳಬೇಕು. ಐಶ್ವರ್ಯವಂತನ ಹಾಗೂ ಲಾಜರನ ಸಾಮ್ಯವು ನಮ್ಮಲ್ಲಿ ಪ್ರಭಾವ ಬೀರಿದ್ದರೆ: "ನಾನು ಸಾಯಲು ಸಿದ್ಧನೋ?" ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು.

---

## ಮಾಹಿತಿ

ಪ್ರಸಂಗದ ಸಾಧ್ಯತೆಗಳನ್ನು ಇದು ಹೊಂದಿರುತ್ತದೆ.

**ಲೂಕ 14**

ಯೇಸುವನ್ನು ಹಿಂಬಾಲಿಸಲು ಹಿಂಜರಿಯುವ ಜನರಿಗಾಗಿ, ಪ್ರಯೋಗಿಸಬಹುದು (ಲೂಕ 14:16-24). "ಚರ್ಮವೆಂಬ ಕಾರಣವು ಸುಳ್ಳಿನಿಂದ ತುಂಬಿದೆ" ಎಂದು ಒಬ್ಬರು ಹೇಳಿರುವರು. ಕಾರಲ್ ಸ್ಪೈಟ್‌ರ ಪ್ರಕಾರ, "ಒಬ್ಬ ರೈತ ದಲ್ಲಾಳಿ, ಅಯೋಗ್ಯ ಯಜಮಾನ" ಎಂದಿರುವರು.[43]

**ಲೂಕ 15**

ಕಳೆದು ಹೋದ ವಿಚಾರಗಳ ಸಂಗಡ "ಮನೆಯಲ್ಲೇ ಕಳೆದು ಹೋಗಿದ" ಹಿರಿಮಗನ ಕುರಿತು ಪ್ರಸಂಗ ಮಾಡದೆ ಇರಬೇಡಿ.

**ಲೂಕ 16**

ಲೂಕ 16ರ ಶ್ರೀಮಂತ ಹಾಗೂ ಲಾಜರನ ವಿಚಾರವು ಪ್ರಸಂಗಿಗಳಿಗೆ ಆಸಕ್ತಿಯನ್ನು ಮೂಡಿಸಿರುತ್ತದೆ: ನಾನು ಅದನ್ನು ನರಕದಿಂದ ಒಂದು ಪತ್ರ ಎಂದು ವಿವರಿಸಿರುವೆನು.

ನೀಲ್ ಪ್ರೇಯರವರು "ಮೂರು ಕ್ರಿಯೆಗಳಲ್ಲಿ ಅಘಾತ ಹಾಗೂ ಜಯ" ಎಂದಿರುವರು.[44] ದೃಶ್ಯ I ಶ್ರಿಮಂತನು ಜಯವನ್ನು ಆನಂದಿಸಿದನು. ಲಾಜರನು ಅಘಾತ ಅನುಭವಿಸಿದನು. ದೃಶ್ಯ II ಶ್ರಿಮಂತನಿಗೆ ಯೋಗ್ಯ ಸಮಾಧಿ (ಅಧಿಕ ಜಯ)ಯಾಯಿತು. ಲಾಜರನ ಹೆಣವನ್ನು ಅಸಂಪ್ರದಾಯಿಕವಾಗಿ ವಿಳಾಸವಿಲ್ಲದ ಸಮಾಧಿಯಲ್ಲಿ ಇರಿಸಿರಬಹುದು (ಅಧಿಕ ಅಘಾತ). ದೃಶ್ಯ III ರಲ್ಲಿ ಲಾಜರನು ಜಯ ಹೊಂದಲು, ಶ್ರೀಮಂತನು ಅಘಾತವನ್ನು ಅನುಭವಿಸಿದನು. "ದೃಶ್ಯ IIIನೇಯದು" ಪ್ರಮುಖವಾಗಿದೆ.

ಉತ್ತಮ ಮನೆವಾರ್ತೆಯವನ ಕುರಿತು ಪ್ರಸಂಗ ಮಾಡಬಹುದು.

---

ಟಿಪ್ಪಣಿಗಳು

[1]ಸಾಮ್ಯದ ಅರ್ಥವನ್ನು ಕಂಡುಹಿಡಿದು, ಅದನ್ನು ಯೇಸು ಏಕೆ ಹೇಳಿದನು ಎಂದು ಅರಿಯಿರಿ. [2]H. I. Hester, *The Heart of the New Testament* (Liberty, Mo.: Quality Press, 1963), 175. [3]ಸಾಮ್ಯಗಳ ಸಂಖ್ಯೆಗಳ ಬಗ್ಗೆ ಗೊಂದಲವಿದೆ. [4]ಯೇಸು ಫರಿಸಾಯನ ಮನಗೆ ಊಟಕ್ಕೆ ಹೊದನು (J. W. McGarvey and Philip Y. Pendleton, *The Fourfold Gospel or A Harmony of the Four Gospels* [Cincinnati: Standard Publishing Co., 1914], 492; emphasis his). [5]ಈ ಆಹ್ವಾನವನ್ನು ಯೇಸು ಏಕೆ ಒಪ್ಪಿದನು "ಇದನ್ನು ಕುರುಬನ ಅನುಕಂಪ" ಪಾಠದಲ್ಲಿ ನೋಡಿರಿ. [6]"ಜಲರೋಗ" ಎಂಬುವುದು "ನೀರು" ಎಂದು ಅರ್ಥಕೊಡುವ *hudrops* ಎಂಬ ಗ್ರೀಕ್ ಪದದಿಂದ ಬಂದಿದೆ (ಇದರಿಂದ "hydro" ಎಂಬ ಪದವು ಬಂತು). [7]ಜಲಬಾಧೆ, ಕಿಡ್ನಿಗಳ ಮೇಲೆ ಪರಿಣಾಮ ಬೀರುತ್ತದೆ. (Charles B. Clayman, medical ed., *The American Medical Association Home Medical Encyclopedia,* vol. 1 [New York: Random House, 1989], s.v. "dropsy.") [8]ಪ್ರಾಚೀನ ಬರವಣಿಗೆಯಲ್ಲಿ "ಮಗ" "ಕತ್ತೆ" (KJV ನೋಡಿ) ಎಂದಿದೆ. NASBಯಲ್ಲಿ "ಕುಮಾರ" ಎಂದಿದೆ. [9]ಲೂಕ 14:5 ಬಾವಿ, ಅಂದರೆ ಗ್ರೀಕ್‌ನಲ್ಲಿ "ಗುಂಡಿ" (KJV ನೋಡಿ) ಸಾಧಾರಣವಾದ ಅರ್ಥವು "ಬಾವಿ" ಅಥವಾ "ಕೊಳ" ಎಂಬುದು. (ಯೋಹಾನ 4:11, 12; ಯಾಕೋಬನ ಬಾವಿಯನ್ನು ಸೂಚಿಸುತ್ತದೆ). [10]ನಾನು ವಾಸವಾಗಿರುವ ಸ್ಥಳದಲ್ಲಿ "ಭೋಜನ ಪಂಕ್ತಿಯಲ್ಲಿ ಎಲ್ಲರೂ ಮೇಜಿನ ಮುಂದೆ ಮುಂದಾಗಿರಬೇಕೆಂದು" ಹೇಳುವುದುಂಟು. ಸ್ಥಳೀಯ ಸಂಪ್ರದಾಯ ಬಳಸಿ.

[11]ಜನರನ್ನು ಆಹ್ವಾನಿಸುವದರಲ್ಲಿ ತಪ್ಪಲಿ, ಮಾರ್ಥ ಮರಿಯಳು ಯೇಸುವನ್ನು ಆಹ್ವಾನಿಸಿದರು ಪ್ರತಿಕ್ರಿಯೆ ನೀಡಿದವರನ್ನೂ ಕರೆಯಬಹುದು (ಲೂಕ 10:38). [12]ನೀತಿಯವರ ಹಾಗೂ ಅನೀತಿವಂಥರ ಪುನರುತ್ಥಾನ, ಕೆಟ್ಟವರ ಹಾಗೂ ಒಳ್ಳೆಯವರ ಪುನರುತ್ಥಾನ (ಯೋಹಾನ 5:28, 29), ಲೂಕ 14:14 ನೀತಿವಂತರ ಪುನರುತ್ಥಾನ ಧನ್ಯವಾದದ್ದು. [13]ಮೆಸ್ಸೀಯನ ರಾಜ್ಯದ ಕುರಿತ ವಿವಿಧ ಹೇಳಿಕೆಯಿದೆ. [14]ಬಾರದೆ ಹೋದವರ ಸಾಮ್ಯ. [15]ಲೂಕ 14:23 ದೈಹೀಕ ಒತ್ತಾಯವಲ್ಲ, ದೃಢವಾದ ಅನುಸರಣೆ, ಅವಕಾಶವಿಲ್ಲದವರು ಶ್ರಿಮಂತರ ಮನೆಗೆ ಬರಲು ಹಿಂಜರಿಯುವರು. [16]ಯೇಸವಿನ ಮರಣದ ಮೊದಲು, ಜಯದ ಪ್ರವೇಶ ವಿಶೇಷವಾದದ್ದು (ಮತ್ತಾಯ 21:1-11). [17]ಲೂಕ 14:26ನ್ನು ಮತ್ತಾಯ 10:37ರೊಂದಿಗೆ ಹೋಲಿಸಿ. ಲೂಕ 14:27ನ್ನು ಮತ್ತಾಯ 10:38; 16:24; ಮಾರ್ಕ 8:34; ಲೂಕ 9:23 ರೊಂದಿಗೆ ಹೋಲಿಸಿ. [18]ದೃಷ್ಟಾಂತದಲ್ಲಿರುವ "ವೈರಿಗಳ" ಬಗ್ಗೆ ಚಿಂತಿಸಬೇಡಿ. [19]ಲೂಕ 12:33ರೊಂದಿಗೆ ಹೋಲಿಸಿ. ಲೂಕ 12:33ರ ಮೇಲಿರುವ ಸಂಕ್ಷಿಪ್ತ ವ್ಯಾಖ್ಯಾನವನ್ನು "ಹೊಸ ಹಾಗೂ ಹಳೆಯ ವಿಚಾರಗಳು" ಎಂಬ ಪಾಠವನ್ನು ನೋಡಿ, ತಮ್ಮಲ್ಲಿರುವದನ್ನು ಇತರರಿಗೆ ನೀಡಿ ಯೇಸುವನ್ನು ಹಿಂಬಾಲಿಸುವದು ಒಂದು ಉದ್ದೇಶವಾಗಿತ್ತು, ಹಾಗೂ ಕ್ರೈಸ್ತರ ಮೇಲೆ ಉಂಟಾದ ಹಿಂಸೆ (ಅಪೊಸ್ತಲರ ಕೃತ್ಯಗಳು 8:1), ಯೇಸುವನ್ನು ಹಿಂಬಾಲಿಸುವವನು ಯಾರಾದರು ಅವನಿಗಿರುವದೆಲ್ಲವನ್ನು ತೆಗೆದು ಹಾಕುವಾಗ ಅದನ್ನು ಸಹಿಸಲು ಸಿದ್ಧವಾಗಿರಬೇಕು. [20]ಲೂಕ 15:1, 2ನ್ನು ಪ್ರಾಪಂಚಿಕ ಕ್ರಿಯೆಗಳಲ್ಲಿ ತೊಡಗಬಹುದು ಎಂದು ಕೆಲವರು ಸಮರ್ಥಿಸಿದ್ದಾರೆ. ಅವರ ಆತ್ಮವನ್ನು ರಕ್ಷಿಸಲು ಯೇಸು ಅವರೊಂದಿಗೆ ಊಟ ಮಾಡಿದನು (ಲೂಕ 5:30-32). ಆತನು ಅವರ ಪಾಪದಲ್ಲಿ ಪಾಲುಗಾರನಾಗಲಿಲ್ಲ.

[21]ಈ ಹಿಂದೆ ಯೇಸು ಕಳೆದು ಹೋದ ಕುರಿಯ ಸಾಮ್ಯವನ್ನು ಹೇಳಿರುವನು (ಮತ್ತಾಯ 18:12-14). [22]ನೀತಿವಂತರು ಯಾರೂ ಇಲ್ಲದಿರುವದರಿಂದ (ರೋಮಾಪುರ 3:10) ಎಲ್ಲರೂ

ಪಶ್ಚಾತ್ತಾಪ ಪಡಬೇಡು (ಅಪೊಸ್ತಲರ ಕೃತ್ಯಗಳು 17:30), ಲೂಕ 15:7ರಲ್ಲಿ ವಿವಿಧ ನಿಯಮಳಿವೆ, ಫರಿಸಾಯರು ಪಶ್ಚಾತ್ತಾಪ ಪಡುವ ಅಗತ್ಯವಿಲ್ಲ ಎಂದು ತಿಳಿದಿದ್ದರು (ಲೂಕ 18:9). [23]ಒಂದು ಆಣೆ - ಒಂದು ದಿನದ ಕೂಲಿ. [24]ತಪ್ಪಿಹೋದ ಮಗನ ಸಾಮ್ಯವನ್ನು "ಪಾಪದ" "ಅಪನಂಬಿಕೆಯು" ಸಾಮ್ಯ ಎಂದು ಕರೆ ದಿದ್ದರೂ, ನಾವು ಅದನ್ನು "ವ್ಯರ್ಥದ" ಸಾಮ್ಯ ಎಂದಿದ್ದೇವೆ. [25]John Franklin Carter, *A Layman's Harmony of the Gospels* (Nashville: Broadman Press, 1961), 216. [26]ಪುಸ್ತಕದ ಮುಂದಿನ ಪಾಠವನ್ನು ನೋಡಿರಿ. [27]NASBಯಲ್ಲಿ "ವ್ಯವಸ್ಥಾಪಕ" ಎಂದಿರುತ್ತದೆ. ವ್ಯವಹಾರಸ್ಥನು "ಅಪನಂಬಿಕೆ." "ವಂಚಕ" ಹಾಗೂ ಅನೀತಿ ಮನೆವಾರ್ತೆಯವನು (ಲೂಕ 16:8; KJV). [28]ಸುಂಕದವರು ಹಾಗೂ ಪಾಪಿಗಳು ಸಹಜವಾಗಿ ಕೆಲಸಕ್ಕೆ ಬಾರದವರ ಸ್ನೇಹಮಾಡಿದ್ದರು ಆದ್ದರಿಂದ ಯೇಸು ಈ ಸಾಮ್ಯವನ್ನು ಹೇಳಿದನು. [29]ಮನೆವಾರ್ತೆಯವನು ಬಿಡುಗಡೆಗಾಗಿ ಕೆಲಸದಿಂದ ತೆಗೆಯಲ್ಪಟ್ಟನು. [30]ಅಪನಂಬಿಗಸ್ಥನಾದರೂ, ಸರಿಯಾದ ಕ್ರಿಯೆಯನ್ನೆ ಮಾಡಿದನು. ಆದರೆ ಅವನು ಪ್ರಾಪಂಚಿಕ ಬುದ್ಧಿಯನ್ನು ಹೊಂದಿದ್ದನು (1 ಕೊರಿಂಥ 1:20; ಯಾಕೋಬ 3:15). "ಮೋಸ ಬುದ್ಧಿವುಳ್ಳವನಾಗಿ ದ್ದನು."

[31]ಹಣದಲ್ಲಿ ಕೆಟ್ಟದ್ದು ಒಳ್ಳೆಯದು ಎರಡೂ ಇರುವದಿಲ್ಲ. ಲೂಕ 16:9ರಲ್ಲಿ "ಅವನು ಅನೀತಿವಂತನ ಸ್ವಾಸ್ಥ್ಯ" ಎನ್ನುತ್ತಾರೆ. ಏಕೆಂದರೆ ಅದರ ಆಶೆಯ ನಿಮಿತ್ತ ಅನೇಕರಲ್ಲಿ ಅನೀತಿಯ ಉದ್ಭವಿಸುತ್ತದೆ (1 ತಿಮೊಥೆ 6:10). [32]ಲೂಕ 12:33 ನೋಡಿರಿ. [33]ಅಮೇರಿಕದಲ್ಲಿ ಆತನನ್ನು ಪ್ರಶ್ನೋತ್ತರಗಳಿಂದ ಭಾದಿಸುವುದು ಎಂದು ಹೇಳುತ್ತಾರೆ. ಲೂಕ 23:35ರೊಂದಿಗೆ ಹೋಲಿಸಿ. [34]ಲೂಕ 16:15-18 ಫರಿಸಾಯರ ಕುರಿತ ಕ್ರಿಸ್ತನ ಬೋಧನೆ. [35]ಮಲಾಕಿಯು ನಂತರ ನಾನೂರು ವರ್ಷಗಳಾದ ಮೇಲೆ ಸ್ನಾನಿಕನಾದ ಯೋಹಾನನು ಮೌನವನ್ನು ಮುರಿದು (ಸುವಾರ್ತೆ) ಪಶ್ಚಾತ್ತಾಪ ಪಡಿರಿ ಎಂದು ಸಾರಿದನು ಫರಿಸಾಯರು ದೇವರ ಮಾರ್ಗದಿಂದ ಬಾರದೆ ತಮ್ಮ ಸಂಪ್ರದಾಯಗಳನ್ನೇ ಬೋಧಿಸಿದರು. [36]ಲೂಕ 16:17ನ್ನು ಮತ್ತಾಯ 5:18ರೊಂದಿಗೆ, ಹಾಗೂ ಲೂಕ 16:18ನ್ನು ಮತ್ತಾಯ 5:31, 32ರೊಂದಿಗೆ ಹೋಲಿಸಿ, ತಂದೆ ತಾಯಿಗಳ ಚಿಂತನೆಯ ಬಗ್ಗೆ ಮದವೆಯ ಬಗ್ಗೆ ಫರಿಸಾಯರು ಬಳಸಿದರು (ಮತ್ತಾಯ 15:1-9; ಮತ್ತಾಯ 19:1-9). [37]ಲಾಜರನ ಹೆಸರನ್ನು ತಿಳಿಸಿ, ಶ್ರೀಮಂತನ ಹೆಸರನ್ನು ತಿಳಿಸಿರುವದಿಲ್ಲ. [38]ವಿವರಣೆಗಾಗಿ "ನರಕದಿಂದ ಒಂದು ಪತ್ರ" ಎಂಬ ಪಾಠ ನೋಡಿರಿ. [39]ಮರಣದ ನಂತರದ ಶಿಕ್ಷೆಯನ್ನು ನಂಬದವರು. [40]McGarvey and Pendleton, 514.

[41]Carter, 221. [42]ಪ್ರಾಯೋಗಿಕವಾಗಿ ದೇವರನ್ನೆರಿಯದ ಜನರನ್ನು ಹಾಗೂ ಮಕ್ಕಳ ಸ್ನೇಹಿತರನ್ನು ಸಂಧಿಸಬಹುದು. [43]Judsonia church of Christ, Judsonia, Arkansas, 26 October 1999ರಲ್ಲಿ ಮಾಡಿದ ಪ್ರಸಂಗ. [44]Brown Trail church of Christ, Bedford, Texas, September 1985 ಯಲ್ಲಿ, ಸಭೆಯಲ್ಲಿ ಮಾಡಿದ ಪ್ರಸಂಗ.